

ತಿರಸ್ಕರಿಸಿದೆ ಎಂಬುದಕ್ಕೆ ಸಾವಿತ್ರಿಯಲ್ಲಿ ಕಾರಣವಿಲ್ಲ. ಮದುವೆ, ಗಂಡಸಿನ ಪ್ರೇಮ ಯಾವುದೂ ಬೇಡವೇ? ಆ ಬಗೆಗೂ ಅವಳಲ್ಲಿ ಸ್ಪಷ್ಟತೆ ಇಲ್ಲ. ಭ್ರಮರಾ ಇವಳಿಗಿಂತ ಭಿನ್ನವಾಗಿರುವವಳು. ಬದುಕಿನ ಕಠಿಣ ಸಂದರ್ಭಗಳನ್ನು ತಮಾಷೆಯಲ್ಲೆ ಮ್ಯಾನೇಜ್ ಮಾಡುವಷ್ಟು ಶಕ್ತಳು. ಮದುವೆ, ಪ್ರೇಮ, ಹುಡುಗರ ಜೊತೆಗಿನ ಒಡನಾಟ ಎಲ್ಲದರ ಬಗೆಗೂ ಉತ್ಸಾಹ ತೋರುವ ಭ್ರಮರಾಂಬ, ಸಾವಿತ್ರಿಯ ಎಲ್ಲ ಗುಟ್ಟುಗಳು ಹೊರಬೀಳುವುದು ಭ್ರಮರಾಂಬಳ ಕಿವಿಯಲ್ಲಿ. ತಾವಿಬ್ಬರೂ ಬೇರೆ ಬೇರೆ ರೀತಿಯವರು ಎಂದು ಭ್ರಮರಾಳಿಗೆ ಗೊತ್ತು. ಸಾವಿತ್ರಿಯ ಆಳದ ಗೊಂದಲಗಳನ್ನು ಅರ್ಥ ಮಾಡಿಕೊಂಡಿರುವ ಭ್ರಮರಾ ತನ್ನ ಬದುಕಿನ ಹಲವು ಮುಖ್ಯ ಸಂಗತಿಗಳ ಬಗೆಗೂ ಅಷ್ಟೆಲ್ಲ ಯೋಚಿಸಿ ಹೈರಾಣಾಗಲು ಹೋಗದೆ ತುಸು ನಿರ್ಲಕ್ಷ್ಯದಲ್ಲೆ ಎಲ್ಲ ಸಂಭಾಳಿಸುವವಳು. ಅವಳು ತನ್ನೊಳಗಿನ ಜೀವದ್ರವ್ಯವನ್ನು ಕಾಪಾಡಿಕೊಳ್ಳುವುದೇ ಇಂತಹ ತುಸು ನಿರ್ಲಕ್ಷ್ಯ ಮಾಡುವ ಗುಣದಿಂದಾಗಿಯೇ. ಭ್ರಮರಾ ಮದುವೆಯಾಗುವ ಹುಡುಗನ ವಿಷಯದಲ್ಲೂ ಇಂಥದ್ದೆ ಧೋರಣೆಯುಳ್ಳವಳು ಎಂಬುದು ಸಾವಿತ್ರಿಯ